**P & SC No. 10009/2025**
**ಪಿ.ಡಬ್ಲೂ –3**

**ದಿನಾಂಕಃ** 13.01.2026 **ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ**

**ಅರ್ಜಿದಾರರ ಸಾಕ್ಷಿದಾರರು ಹಾಜರಿರುತ್ತಾರೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಅದರಲ್ಲಿ ತಿಳಿಸಿದ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದ್ದು ನನ್ನ ಹೇಳಿಕೆಯ ಮೇರೆಗೆ ದಾಖಲಿಸಲಾಗಿರುತ್ತದೆ ಎಂದು ಪ್ರಮಾಣೀಕರಿಸಿರುತ್ತಾರೆ ಪಿ.ಡಬ್ಲೂ**-2 **ಎಂದು ವಿಚಾರಿಸಲಾಯಿತು.**

ತಿಪ್ಪಯ್ಯ ಎಂಬುವವರು ಅರ್ಜಿದಾರರಿಗೆ ದಿನಾಂಕ 06.10.2006 ರಂದು ಬರೆದುಕೊಟ್ಟಿರುವ ನೊಂದಾಯಿತ ವಿಲ್‌ನ್ನು ಹಾಜರಪಡಿಸಿದ್ದು, ಅದನ್ನು ನಿಪಿ-10 ಎಂದು ಗುರುತಿಸಲಾಗಿದ್ದು, ಮಂಜುನಾಥ ರವರ ಸಹಿಯನ್ನು ಈಗಾಗಲೇ ನಿಪಿ-10(ಎ) ಎಂದು ಹಾಗೂ ಸದರಿ ದಾಖಲೆಗೆ ನಾನು, ಇನ್ನೊಬ್ಬ ಸಾಕ್ಷಿದಾರರಾದ ಮೂರ್ತಿ ಎಂಬುವವರು ಸಾಕ್ಷಿಯಾಗಿ ಸಹಿ ಮಾಡಿದ್ದು, ಸದರಿ ಪತ್ರವನ್ನು ಜಿ. ಸಿದ್ದಲಿಂಗಯ್ಯ ಎಂಬುವವರು ತಯಾರು ಮಾಡಿರುತ್ತಾರೆ. ಸದರಿಯವರ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಮೂರ್ತಿ ರವರ ಸಹಿಯನ್ನು ಈಗಾಗಲೇ ನಿಪಿ-10(ಬಿ) ಎಂದು, ಪತ್ರ ಬರಹಗಾರಾದ ಜಿ. ಸಿದ್ದಲಿಂಗಯ್ಯ ರವರ ಸಹಿಯನ್ನು ಈಗಾಗಲೇ ನಿಪಿ-10(ಸಿ) ಎಂದು ಮತ್ತು ನನ್ನ ಸಹಿಯನ್ನು ಈಗಾಗಲೇ ನಿಪಿ-10(ಡಿ) ಗುರುತಿಸಲಾಗಿದೆ. ಸದರಿ ದಾಖಲೆಗೆ ತಿಪ್ಪಯ್ಯ ಹೆಬ್ಬೆಟ್ಟು ಗುರುತು ಹಾಕಿರುತ್ತಾರೆ. ನನ್ನ ಆಧಾರ್ ಕಾರ್ಡ್ ಮೂಲ ದಾಖಲೆ ನೋಡುತ್ತಿದ್ದು, ಅದರ ಪ್ರತಿಯನ್ನು ನಿಪಿ-12 ಎಂದು ಗುರುತಿಸಲಾಗಿ, ಮೂಲ ದಾಖಲೆಯನ್ನು ಸಾಕ್ಷಿಗೆ ಮರಳಿ ನೀಡಲಾಗಿರುತ್ತದೆ.

**ಎದುರುದಾರರು ಯಾರು ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

4 **ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**